Economic thought a brief history

# ಅರ್ಥಶಾಸ್ತ್ರ ಚಿಂತನೆ

## ಒಂದು ಕಿರು ಇತಿಹಾಸ

—---------------------

*ಹೈನ್ಸ್ ಡಿ ಕುರ್ಜ್*

---

ಅನುವಾದಕರು ಜೆರೆಮಿಯ ರೈಮರ್
ಕೊಲಂಬಿಯಾ ವಿಶ್ವವಿದ್ಯಾಲಯದ ಮುದ್ರಣಾಲಯ
ನ್ಯೂ ಯಾರ್ಕ್

ಪರಿವಿಡಿ

—---------

ಮುನ್ನುಡಿ
ಪೀಠಿಕೆ
1
1. ಆರಂಭಕಾಲದ ಅರ್ಥಶಾಸ್ತ್ರೀಯ ಚಿಂತನೆ
2. ಅಭಿಜಾತ ಅರ್ಥಶಾಸ್ತ್ರ
3. ಮಾರ್ಕ್ಸ್ ಮತ್ತು ಸಮಾಜವಾದಿಗಳು
4. ಸೀಮಾಂತವಾದದ ಉಗಮ
5. ಮಾರ್ಷಲ್ ಮತ್ತು ಭಾಗಶಃ ಸಮತೋಲನ  ಸಿದ್ಧಾಂತ
6. ಉಪಯುಕ್ತತಾವಾದ, ಕಲ್ಯಾಣ ರಾಜ್ಯ ಸಿದ್ದಾಂತ ಮತ್ತು ಪದ್ಧತಿಗಳ ಚರ್ಚೆ
7. ಅಪರಿಪೂರ್ಣವಾದ ಸ್ಪರ್ಧೆ
8. ಶುಮ್ ಪೀಟರ್ ಮತ್ತು ಸೃಜನಶೀಲ ವಿನಾಶದ ತತ್ವ
9. ಕೀನ್ಸ್ ಮತ್ತು ಪರಿಣಾಮಕಾರಿ ಬೇಡಿಕೆಯ ತತ್ವ
೧೦. ಕೀನ್ಸ್ ಗೆ ಪ್ರತಿಕ್ರಿಯೆಗಳು
೧೧. ಸಾಮಾನ್ಯ ಸಮತೋಲನ ಸಿದ್ಧಾಂತ ಮತ್ತು ಕಲ್ಯಾಣ ಸಿದ್ಧಾಂತ
೧೨. ಆಯ್ದ ಕ್ಷೇತ್ರಗಳ ಅಭಿವೃದ್ಧಿ
ಕೊನೆಯ ಮಾತು

—-----------------------------------------

# ಪೀಠಿಕೆ

—-----------

ಈ ಪುಸ್ತಕವು, 2013ರಲ್ಲಿ ಸಿ ಎಚ್ ಬೆಕ್ ಅವರು ಮ್ಯೂನಿಕ್ ನಗರದಲ್ಲಿ ಪ್ರಕಟಿಸಿದ ನನ್ನ 'ಗೆಶಿಷ್ಟ್ ಡೆಸ್ ಎಕೊನಾಮಿಶನ್ ದೆಂಕನ್ ' ಎಂಬ ಪುಸ್ತಕದ ಕೊಂಚ ವಿಸ್ತರಿಸಿದ, ಪರಿಷ್ಕರಿಸಿದ ಆವೃತ್ತಿಯ ಅನುವಾದವಾಗಿದೆ. ಇದರ ಜರ್ಮನ್ ಆವೃತ್ತಿಯು 'ವಿಸ್ಸೆನ್' (ಜ್ಞಾನ) ಎಂಬ ಸರಣಿಯಲ್ಲಿ ಕಾಣಿಸಿಕೊಂಡಿತ್ತು. ಆ ಸರಣಿಯು ಮೂಲಭೂತವಾಗಿ ವಿಜ್ಞಾನ, ಮಾನವಿಕ ಶಾಸ್ತ್ರಗಳು, ಚರಿತ್ರೆ, ಕಲೆಗಳು, ಧರ್ಮಗಳು ಹೀಗೆ ಜ್ಞಾನದ ಎಲ್ಲ ಕ್ಷೇತ್ರಗಳಿಗೂ ಓದುಗರನ್ನು ಪರಿಚಯಿಸುತ್ತದೆ. ಇದರಲ್ಲಿ ಪ್ರತಿಯೊಂದು ಸಾಧಾರಣ ಪ್ರತಿಯೂ ಸಹ ಖಚಿತವಾಗಿ 128 ಪುಟಗಳಷ್ಟಿದ್ದು, ಯಾವುದೇ ಪೂರ್ವ ತಿಳಿವಳಿಕೆ ಇಲ್ಲದಿರುವ ಆದರೆ ವಿಷಯದಲ್ಲಿ ಆಸಕ್ತರಾಗಿರುವ ಎಲ್ಲ ಓದುಗರನ್ನು ಗುರಿಯಾಗಿಸಿಕೊಂಡಿದೆ.

ಈ ಸಂಗತಿಯು ಪ್ರಸ್ತುತ ಪುಸ್ತಕಕ್ಕೂ ಅನ್ವಯಿಸುತ್ತದೆ. ಇದನ್ನು ತಾಂತ್ರಿಕ ಪರಿಭಾಷೆಯ ಶೈಲಿಯಲ್ಲಿ ರಚಿಸಿಲ್ಲ. ಇದು ಚಿತ್ತಾಕರ್ಷಕವಾದ ಅರ್ಥಶಾಸ್ತ್ರದ ಜಗತ್ತಿಗೆ ಪ್ರವೇಶವನ್ನು ಸುಲಭ ಮಾಡಿ ಕೊಡುವ ಉದ್ದೇಶವನ್ನು ಹೊಂದಿದೆ. ಓದುಗರಾದ ನಿಮಗೆ ಅಗತ್ಯವಿರುವುದು ಓದುವ ಸಾಮರ್ಥ್ಯ ಮತ್ತು ಚಿಂತಿಸಬಲ್ಲ ಶಕ್ತಿ. ಇದರಲ್ಲಿ ಕೆಲವೊಂದು ರೇಖಾಚಿತ್ರಗಳು, ಕೆಲವು ಸರಳವಾದ ಸಂಖ್ಯಾ ಉದಾಹರಣೆಗಳು ಮತ್ತು ಕೆಲವೊಂದು ಅರ್ಥಶಾಸ್ತ್ರದ ಪ್ರಮಾಣಗಳನ್ನು ಪ್ರತಿನಿಧಿಸಲು ಅಲ್ಲಲ್ಲಿ ಸಂಕೇತಗಳನ್ನು ಉಪಯೋಗಿಸಲಾಗಿದ್ದರೂ, ಓದುಗರು ಸುಲಭವಾಗಿ ಅದರ ಮೇಲೆ ತಮ್ ಪರಿಣಿತಿಯನ್ನು ಸಾಧಿಸಬಹುದಾಗಿದೆ. ಆಲ್ಬರ್ಟ್ ಐನ್ಸ್ಟೈನ್ ಅವರು ಹೇಳಿದ್ದನ್ನೇ ನನ್ನ ಮಾತಿನಲ್ಲಿ ಹೇಳಬೇಕೆಂದರೆ : ಈ ಪುಸ್ತಕವನ್ನು ಓದಲು ನೀವು ವಿಶೇಷ ಪ್ರತಿಭೆಯನ್ನೇನೂ ಹೊಂದಿರಬೇಕಿಲ್ಲ. ನಿಮಗೊಂದು ತೀವ್ರವಾದ ಕುತೂಹಲವಿದ್ದರೆ ಸಾಕು. ನಾವು ಬದುಕಿರುವ ಜಗತ್ತಿನಲ್ಲಿ ಆರ್ಥಿಕ ವಲಯಕ್ಕೆ ಇರತಕ್ಕಂತಹ ಸರ್ವವ್ಯಾಪಿ ಪ್ರಾಮುಖ್ಯತೆಯ ಸಂದರ್ಭದಲ್ಲಿ ಅದರ ಬಗ್ಗೆ ಅರ್ಥಶಾಸ್ತ್ರಜ್ಞರು ಏನು ಹೇಳುತ್ತಾರೆ ಎಂಬುದರ ಬಗ್ಗೆ ತೀವ್ರವಾದ ಕುತೂಹಲವನ್ನು ಯಾರೇ ಆಗಲಿ ಹೊಂದಿರದಿರಲು ಸಾಧ್ಯವೇ?

ಪ್ರಸ್ತುತ ಪುಸ್ತಕವು ಸ್ವಲ್ಪಮಟ್ಟಿಗೆ ಮೂಲ ಜರ್ಮನ್ ಆವೃತ್ತಿಗಿಂತ ದೀರ್ಘವಾಗಿದೆ ಮತ್ತು ಹೆಚ್ಚು ಅಂತರರಾಷ್ಟ್ರೀಯ ಅದರಲ್ಲೂ ವಿಶೇಷವಾಗಿ ಅಮೆರಿಕದ ಓದುಗರನ್ನು ಗಮನದಲ್ಲಿಟ್ಟುಕೊಂಡಿದೆ. ಜರ್ಮನ್ ಓದುಗರಿಗೆ ಮಾತ್ರ ವಿಶೇಷ ಆಸಕ್ತಿಯನ್ನು ಹುಟ್ಟಿಸಬಹುದಾದ ವಿಷಯಗಳಿಗೆ ಬದಲಾಗಿ 'ಹೊಸ ಜಗತ್ತಿನಿಂದ' ಅರ್ಥಶಾಸ್ತ್ರಕ್ಕೆ ಬರುತ್ತಿರುವ ಕೊಡುಗೆಗಳನ್ನು ಈಗ ಹೆಚ್ಚು ವಿವರವಾಗಿ ಚರ್ಚಿಸಲಾಗಿದೆ.

ಜರ್ಮನ್ ಮತ್ತು ಅಮೆರಿಕನ್ ಆವೃತ್ತಿಗಳ ಮೇಲೆ ಕೆಲಸ ಮಾಡುವಾಗ ನಾನು ಅನೇಕ ಗೆಳೆಯರಿಂದ ಹಾಗೂ ಸಹೋದ್ಯೋಗಿಗಳಿಂದ ಅತ್ಯಂತ ಮೌಲ್ಯಯುತವಾದ ಅಭಿಪ್ರಾಯಗಳನ್ನು ಹಾಗೂ ಸಲಹೆಗಳನ್ನು ಸ್ವೀಕರಿಸಿದ್ದೇನೆ. ವಿಶೇಷವಾಗಿ ನಾನು ಮ್ಯಾನ್ ಫ್ರೆಡ್ ಹಾಲರ್, ಕೆಂಜಿ ಮೋರಿ, ಹೈನ್ಜ್ ರಿಯೆಟರ್, ಹ್ಯಾನ್ಸ್ - ಪೀಟರ್ ಸ್ಪಾಹ್ನ್ ಮತ್ತು ಎರಿಕ್ ಸ್ಟ್ರೈಸ್ ಲರ್ ಅವರಿಗೆ ಕೃತಜ್ಞನಾಗಿದ್ದೇನೆ. ಅದೇ ರೀತಿಯಲ್ಲಿ ಗಿಲ್ಬರ್ಟ್ ಫೆಕ್ಕಾರೆಲ್ಲೋ, ಡಂಕನ್ ಫೋಲೆ, ದಿವಂಗತ ಪಿಯರಾಂಜೆಲೋ ಗಾರೆಗ್ನಾನಿ, ಕ್ರಿಶ್ಚಿಯನ್ ಗೆಹರ್ಕೆ, ಹೆರಾಲ್ಡ್ ಹಾಗೆಮನ್, ಜೆಫ್ ಹಾರ್ ಕೋರ್ಟ್, ಪೀಟರ್ ಕಲ್ಮ್ ಬಾಚ್, ಸ್ತಾನ್ ಮೆಟ್ ಕಾಫೆ, ಎಡ್ವರ್ಡ್ ಜೆನೆಲ್, ನೇರಿ ಸಾಲ್ವಡೋರಿ, ದಿವಂಗತ ಪಾಲ್ ಎ ಸ್ಯಾಮ್ಯುಯೆಲ್ಸನ್, ರಿಚರ್ಡ್ ಸ್ಟರ್ನ್, ಅಯಾನ್ ಸ್ಟೀಡ್ ಮನ್, ಹ್ಯಾನ್ಸ್-ಮೈಖೇಲ್ ಟ್ರಾಟ್ ವೇಯ್ನ್ ಇವರೆಲ್ಲರೂ ಸಂಬಂಧ ಪಟ್ಟ ವಿಷಯಗಳ ಬಗ್ಗೆ ಅನೇಕ ವರ್ಷಗಳ ಕಾಲ ಹಲವಾರು ಚರ್ಚೆಗಳಲ್ಲಿ ನೆರವಾದದ್ದಕ್ಕೆ ವಂದನೆಗಳು. ಅಮೆರಿಕನ್ ಆವೃತ್ತಿಯ ಪಠ್ಯಕ್ಕೆ ಉಪಯುಕ್ತ ಸಲಹೆ ನೀಡಿದ ಅನಾಮಧೇಯ ವಿಮರ್ಶಕರಿಗೂ ಸಹ ನಾನು ಧನ್ಯವಾದಗಳನ್ನು ಅರ್ಪಿಸಬೇಕು. ಸಿ. ಎಚ್. ಬೆಕ್ ನಲ್ಲಿ ನನ್ನ ಸಂಪಾದಕರಾದ ಜೋನಾಥನ್ ಬೆಕ್ ಅವರಿಗೆ, ಕೊಲಂಬಿಯಾ ವಿಶ್ವವಿದ್ಯಾಲಯದ ಮುದ್ರಣಾಲಯದಲ್ಲಿ ನನ್ನ ಸಂಪಾದಕರಾದ ಬ್ರಿಡ್ಜೆಟ್ ಫ್ಲಾನರಿ- ಮೆಕ್ ಕಾಯ್ ಅವರಿಗೆ ಮತ್ತು ಅನುವಾದಕರಾದ ಜೆರೆಮಿಯ ರೈಮರ್ ಅವರಿಗೆ ವಿಶೇಷ ವಂದನೆಗಳು. ಬ್ರಿಡ್ ಜೆಟ್ ಮತ್ತು ಜೆರೆಮಿಯ ಅವರೊಂದಿಗಿನ

ಸಹಯೋಗವು ಪರಿಣಾಮಕಾರಿಯೂ ಮತ್ತು ಆನಂದದಾಯಕವೂ ಆಗಿತ್ತು. ಅಲ್ಲದೇ ನಾನು ಮಂಡಿಸಿರುವ ವಾದವು ಇದೀಗ ಅರ್ಥ ಮಾಡಿಕೊಳ್ಳಲು ಸುಲಭವಾಗಿದ್ದರೆ ಮತ್ತು ಓದುವುದಕ್ಕೆ ಸಾಕಷ್ಟು ಹಿತಕರವಾಗಿದ್ದರೆ ಅದರ ಕೊಡುಗೆ ಅವರದ್ದೇ ಆಗಿದೆ.

ಇದನ್ನು ಇದೀಗ ಎಲ್ಲ ಲೇಖಕರ ಆಕಾಂಕ್ಷೆಯ ಕೇಂದ್ರ ಬಿಂದುವಾದ 'ತೀವ್ರ ಕುತೂಹಲಿ'ಗಳಾದ ಓದುಗರಿಗೆ ಅರ್ಪಿಸುತ್ತಿದ್ದೇನೆ, ಈ ಪುಸ್ತಕ ರಚಿಸಲು ನಡೆದಿರುವ ಎಲ್ಲ ಪ್ರಯತ್ನ ಮತ್ತು ಪರಿಶ್ರಮದ ಫಲಿತಾಂಶದ ಬಗ್ಗೆ ಅವರು ತಮ್ಮ ನಿರ್ಣಯವನ್ನು ಕೊಡಬೇಕು.

ಹೈನ್ಜ್ ಡಿ ಕರ್ಝ್
ಗ್ರಾಜ್, 8 ಜೂನ್ 2015

—--------------------------

*ನಾವು ಹೊಸ ಬಟ್ಟೆಗಳಲ್ಲಿ ಹಳೆಯ ಗೆಳೆಯರನ್ನು ಸತತವಾಗಿ ಭೇಟಿಯಾಗುತ್ತಲೇ ಇರುತ್ತೇವೆ.*

–ಆಲ್ಫ್ರೆಡ್ ಮಾರ್ಷಲ್

*ಪಾರ್ಟಿಗಳಿಗೆ ಹಳೆಯ ಗೆಳೆಯರು ಮಾರುವೇಷದಲ್ಲಿ ಬರುತ್ತಾರೆ.*

–ಜೋಸೆಫ್ ಎ ಶುಂಪೀಟರ್

*ಅರ್ಥಶಾಸ್ತ್ರಜ್ಞರು ಮತ್ತು ರಾಜಕೀಯ ತತ್ವಶಾಸ್ತ್ರಜ್ಞರ ವಿಚಾರಗಳು ಅವು ಸರಿಯಾಗಿರಲಿ ಅಥವಾ ತಪ್ಪಾಗಿರಲಿ, ಅವು ಸಾಮಾನ್ಯವಾಗಿ ಅರ್ಥ ಮಾಡಿಕೊಳ್ಳುವುದಕ್ಕಿಂತ ಹೆಚ್ಚು ಶಕ್ತಿಶಾಲಿಯಾಗಿ ಇರುತ್ತವೆ. ಈ ಜಗತ್ತನ್ನು ಆಳುತ್ತಿರುವುದು ಅವುಗಳೇ.*

–ಜಾನ್ ಮೇನಾರ್ಡ್ ಕೀನ್ಸ್

—---------------------------------

# ಆರ್ಥಿಕ ಚಿಂತನೆ

—------------------

ಪೀಠಿಕೆ

ಕೇವಲ 30 ಪುಟಗಳಲ್ಲಿ ಆರ್ಥಿಕ ಚಿಂತನೆಯ ಇತಿಹಾಸವೇ? ಅಸಾಧ್ಯ! ಅಥವಾ ಹಾಗಲ್ಲವೇನೋ?

1914ರಲ್ಲಿ ಜೋಸೆಫ್ ಎ. ಶುಂಪೀಟರ್ (1883- 1950) ಅವರು ತಮ್ಮ 'ಎಕನಾಮಿಕ್ ಡಾಕ್ಟ್ರೈನ್ ಅಂಡ್ ಮೆಥಡ್- ಎ ಹಿಸ್ಟಾರಿಕಲ್ ಸ್ಕೆಚ್' (ಅರ್ಥಶಾಸ್ತ್ರದ ಸಿದ್ಧಾಂತ ಮತ್ತು ವಿಧಾನ : ಒಂದು ಚಾರಿತ್ರಿಕ ಚಿತ್ರಣ) ಎಂಬ ನೂರು ಪುಟಗಳ ಪ್ರಬಂಧವನ್ನು ಬರೆದು, ಅದರಲ್ಲಿ ಪುರಾತನ ಕಾಲದಿಂದ ಹಿಡಿದು ಅಂದು ಯಾವುದನ್ನು ಆಧುನಿಕ ಕಾಲ ಎನ್ನಲಾಗುತ್ತಿತ್ತೋ ಅಲ್ಲಿಯವರೆಗಿನ ವಿವರಣೆಯನ್ನು ನೀಡಿದರು. ಶುಂಪೀಟರ್ ಅವರ 100 ಪುಟಗಳ ಪ್ರಬಂಧದಲ್ಲಿ 20ನೆಯ ಶತಮಾನದ ಆರಂಭದವರೆಗಿನ ವಿವರಗಳನ್ನು ಹೇಳುವುದು ಸಾಧ್ಯವಾದರೆ ಖಂಡಿತವಾಗಿಯೂ 30 ಪುಟಗಳಲ್ಲಿ ಶತಮಾನದ ಅಂತ್ಯದವರೆಗಿನ ಬೆಳವಣಿಗೆಗಳನ್ನು

ಹೇಳಬಹುದು. ಅಷ್ಟು ಸ್ಥಳಾವಕಾಶ ಖಂಡಿತವಾಗಿಯೂ ಸಾಕಾಗುತ್ತದೆ; ನಾವು ನಮ್ಮ ಕಥನದಲ್ಲಿ ಕೆಲವೊಂದು ಖಾಲಿ ಜಾಗಗಳನ್ನು ಬಿಡುವ ಅಪಾಯವಿದೆ ಎಂಬುದನ್ನು ಒಪ್ಪಿಕೊಳ್ಳುವುದಾದರೆ.

ಶುಂಪೀಟರ್ ಅವರ ಹಳೆಯ ಪಠ್ಯವನ್ನು ತೆಗೆದುಕೊಂಡು ಅದಕ್ಕೆ ಈ 30 ಪುಟಗಳ ಪಠ್ಯವನ್ನು ಸುಮ್ಮನೆ ಸೇರಿಸಿಬಿಟ್ಟರೆ ಅದು ಸಾಕಾಗುತ್ತದೆಯೇ? ದುರದೃಷ್ಟವಶಾತ್ ಸಾಕಾಗುವುದಿಲ್ಲ. ಯಾವುದೇ ಒಂದು ಕ್ಷೇತ್ರಕ್ಕೆ ಸಂಬಂಧಿಸಿದ ಚರಿತ್ರೆಯನ್ನು ಒಂದೇ ಬಾರಿಗೆ ಬರೆದು ಮುಗಿಸಲಾಗುವುದಿಲ್ಲ. ಅದೊಂದು ಸತತವಾಗಿ ಬದಲಾಗುತ್ತಿರುವ ಸಂರಚನೆಯಾಗಿದ್ದು, ಅದರಲ್ಲಿ ಹೊಸ ತಲೆಮಾರುಗಳು ತಮ್ಮದೇ ಆದ ಸಮಸ್ಯೆಗಳನ್ನು, ವಿಚಾರಗಳನ್ನು ಕೈಗೆತ್ತಿಕೊಂಡು ಹಳೆಯ ತಲೆಮಾರಿನ ಸಮಸ್ಯೆಗಳು ಮತ್ತು ವಿಚಾರಗಳೊಂದಿಗೆ ಸೆಣೆಸಾಡುತ್ತವೆ. ಕಾಲ ಸರಿದಂತೆ ಆರ್ಥಿಕ ವ್ಯವಸ್ಥೆಯೊಂದು ಹೇಗೆ ಕೆಲಸ ಮಾಡುತ್ತದೆ ಎಂಬುದರ ಬಗ್ಗೆ ಶುಂಪೀಟರ್ ಅವರು ಹೇಳುತ್ತಿದ್ದ 'ನೋಟ' ಎಂಬುದು ಬದಲಾಗಿದೆ ಮತ್ತು ಆ ಬದಲಾದ ನೋಟದೊಂದಿಗೆ ಹಳೆಯ ಆಚಾರ್ಯರ ಕುರಿತಾದ ನಮ್ಮ ತಿಳಿವಳಿಕೆಯು ಬದಲಾಗುತ್ತದೆ ಚರಿತ್ರೆ ಎಂದರೆ ಅದು ಒಂದಾನೊಂದು ಕಾಲದಲ್ಲಿ ಆದದ್ದು, ಈಗ ಇಲ್ಲದಿರುವುದು ಎಂದು ನಂಬುವುದು ಒಂದು ಗಂಭೀರ ತಪ್ಪು ತಿಳಿವಳಿಕೆಯಾಗುತ್ತದೆ. "ಚರಿತ್ರೆ ಎಂಬುದು ಆಗಿ ಹೋದದ್ದಲ್ಲ, ಈಗಿರುವುದು" ಎಂದು ವಿಲಿಯಂ ಫಾಕ್ನರ್ ಹೇಳಿದ್ದರು. ಹಾಗಿದ್ದೂ ಕೂಡ ಈ ತಪ್ಪು ತಿಳಿವಳಿಕೆ ಅರ್ಥಶಾಸ್ತ್ರದ ಒಳಗೂ ಮತ್ತು ಹೊರಗೂ ವಿಶಾಲವಾಗಿ ಹರಡಿಕೊಂಡಿದೆ. ಪ್ರತಿಯೊಂದು ತಲೆಮಾರು ಸಹ ತನ್ನದೇ ಆದ ಚರಿತ್ರೆಯನ್ನು ಬರೆಯುತ್ತದೆ ಮತ್ತು ಅದು ಸ್ವೋಪಜ್ಞವಾಗಿರಬೇಕು ಎಂದು ಗಾಢವಾಗಿ ಬಯಸುವುದಲ್ಲದೆ, ಎಲ್ಲರೂ ಅದನ್ನು ಹಾಗೆ ಭಾವಿಸಬೇಕು ಎಂದು ನಿರೀಕ್ಷಿಸುತ್ತದೆ. ಆದರೆ ಪ್ರತಿಯೊಂದು ತಲೆಮಾರು ಸಹ ತನ್ನ ಪ್ರಸಿದ್ಧಿ ಮತ್ತು ಮೇಧಾವಿತನಗಳನ್ನು ಹಂಚಿಕೊಳ್ಳಲು ಅರ್ಥಪೂರ್ಣವಾದ ಪೂರ್ವಸೂರಿಗಳಿಗಾಗಿ (ಪ್ರೊಜಿನೆಟರ್ಸ್) ಹುಡುಕಾಡುತ್ತದೆ. ಸಮಸ್ಯೆಗಳ ಕುರಿತಾದ ಹೊಸ ತಿಳಿವಳಿಕೆಯೊಂದಿಗೆ ಅದು ಹಿಂದಿನ ತಲೆಮಾರುಗಳಿಗೆ ಹಳೆಯ ಆಚಾರ್ಯರು ನೀಡಿದ ಜ್ಞಾನದ ವಿಭಿನ್ನ ಪಾರ್ಶ್ವಗಳನ್ನು ಅನ್ವೇಶಿಸುತ್ತದೆ. ಹೀಗಾಗಿ ಆ ಕ್ಷೇತ್ರದಲ್ಲಿನ ಮುಂದುವರಿಕೆ ಮತ್ತು ಬದಲಾವಣೆ ಎಂಬುದೇ ಒಂದು ಕೊನೆಯಿಲ್ಲದ ಮುಂದುವರಿಕೆ ಮತ್ತು ಬದಲಾವಣೆಯ ಪ್ರಕ್ರಿಯೆಗೆ ಒಳಪಟ್ಟಿರುತ್ತದೆ. ಇಂದಿಗೂ ಸಹ ಓದಲು ಬಹಳ ಸೊಗಸಾಗಿರುವ ಶುಂಪೀಟರ್ ಅವರ ಹಳೆಯ ಪ್ರಬಂಧವು ಚರಿತ್ರೆಯ ಭಾಗವಾಗಿದೆ. ಈಗ ಅದನ್ನು ಓದಿದರೆ ದೃಷ್ಟಿಕೋನಗಳು ಆಗಿನಿಂದ ಇವತ್ತಿಗೆ ಎಷ್ಟು ಬದಲಾಗಿವೆ, ಎಷ್ಟು ಒಳನೋಟಗಳನ್ನು ಗಳಿಸಿಕೊಳ್ಳಲಾಗಿದೆ ಮತ್ತು ಯಾವುದನ್ನು ಕಳೆದುಕೊಳ್ಳಲಾಗಿದೆ, ಸಂಶೋಧನಾ ವಿಧಾನಗಳು ಹೇಗೆ ಬದಲಾಗಿವೆ ಮತ್ತು ಹೀಗೆ ಇನ್ನೂ ಅನೇಕ ಸಂಗತಿಗಳು ಕಂಡು ಬರುತ್ತವೆ.

ಜಪಾನ್ ದೇಶದ ಅರ್ಥಶಾಸ್ತ್ರಜ್ಞರಾದ ತಕಶಿ ನಗಿಶಿ (ಜನನ 1933) ಅವರ ಪ್ರಕಾರ ಈ ಜಗತ್ತಿನಲ್ಲಿ ಅರ್ಥಶಾಸ್ತ್ರದಲ್ಲಿ ಹೊಸದು ಎಂಬುದು ಏನೂ ಇಲ್ಲ. ಅಭಿಜಾತ ಅರ್ಥಶಾಸ್ತ್ರೀಯ ಪಠ್ಯಗಳಲ್ಲಿ ಎಲ್ಲವನ್ನೂ ಕಾಣಬಹುದು ಎಂದು ಅವರು ವಾದಿಸುತ್ತಾರೆ. ಇದು ನಿಜಕ್ಕೂ ಉತ್ಪ್ರೇಕ್ಷೆಯೇ ಸರಿ. ಆದರೂ ಸಹ ಇದರ ತಿರುಳಿನಲ್ಲಿ ಒಂದಷ್ಟು ಸತ್ಯವಿದೆ. ಬಹುಕಾಲದಿಂದ ಪರಿಚಿತವಾಗಿರುವ ವಿಚಾರವೊಂದನ್ನು ಹೊಸ ಸಂದರ್ಭವೊಂದರಲ್ಲಿ ಪರಿಗಣಿಸಿದಾಗ ಹೊಸ ಸ್ವರೂಪವನ್ನು ಅಥವಾ ಹೊಸ ಅರ್ಥವನ್ನು ಪಡೆದುಕೊಳ್ಳುವಂತಹ ಅನೇಕ ಕಲ್ಪನೆಗಳಿರುತ್ತವೆ. ಅರ್ಥಶಾಸ್ತ್ರದಲ್ಲಿನ ಹೊಸ ಜ್ಞಾನವು ಎಲ್ಲಕ್ಕಿಂತ ಮುಖ್ಯವಾಗಿ ಹೊಸ ರೀತಿಗಳಲ್ಲಿ ಸಂಯೋಜಿತವಾದ ಹಳೆಯ ಜ್ಞಾನದ ತುಣುಕುಗಳಲ್ಲಿ ಇರುತ್ತದೆ. ಜ್ಞಾನದ ವೃಕ್ಷವೊಂದು ಸತತವಾಗಿ ಹೊಸ ಹೊಸ ರೆಂಬೆಕೊಂಬೆಗಳನ್ನು ಚಿಗುರಿಸಿಕೊಳ್ಳುತ್ತಿರುವ ಪ್ರತಿಮೆಯು ಈ ಪ್ರಕ್ರಿಯೆಯ ಸಂಕೇತವಾಗುತ್ತದೆ. ಆದರೆ ಈಗಾಗಲೇ ಸತ್ತುಹೋಗಿವೆ ಎಂದುಕೊಂಡಂತಹ ಕೆಲವು ಶಾಖೆಗಳು ಇದ್ದಕ್ಕಿದ್ದಂತೆ ಹೊಸದಾಗಿ ಚಿಗುರೊಡೆಯುತ್ತವೆ.

ಅಂದರೆ, ಇದರರ್ಥವು, ಅರ್ಥಶಾಸ್ತ್ರವು ಸರಿಯಾದುದು ಮತ್ತು ಮೌಲ್ಯಯುತವಾದದ್ದೆಲ್ಲವನ್ನೂ ಉಳಿಸಿಕೊಳ್ಳುತ್ತದೆ ಮತ್ತು ತಪ್ಪಾದ ಮತ್ತು ತಪ್ಪು ದಾರಿಗೆಳೆಯುವ ಎಲ್ಲವನ್ನೂ ತ್ಯಜಿಸುತ್ತದೆ ಎಂದೇ? ಆರ್ಥಿಕ ಪರಿಕಲ್ಪನೆಗಳ ಮಾರುಕಟ್ಟೆಯು ಒಂದು ಪರಿಪೂರ್ಣವಾಗಿ ಕೆಲಸ ಮಾಡುವ ಆಯ್ಕೆಯ ವಿಧಾನವನ್ನು ಹೊಂದಿದೆಯೇ? ದುರದೃಷ್ಟವೆಂದರೆ ಇದಕ್ಕೆ ಉತ್ತರವಾಗಿ "ಇಲ್ಲ" ಎಂದೇ ಹೇಳಬೇಕಾಗಿದೆ.

ಹಣಕಾಸಿನ ಮಾರುಕಟ್ಟೆಯಲ್ಲಿ ನೀರ್ಗುಳ್ಳೆಗಳು ಸೃಷ್ಟಿಯಾಗುವುದು ಸರ್ವವಿದಿತ. ಈ ನೀರ್ಗುಳ್ಳೆಗಳು ಹುಟ್ಟುವುದು ಏಕೆಂದರೆ ಜನರು ವಾಸ್ತವದ ಒಂದು ಭಾಗದ ಬಗ್ಗೆ ಚಿತ್ರಣವೊಂದನ್ನು ರಚಿಸಿಕೊಳ್ಳುತ್ತಾರೆ ಉಳಿದವರು ಅದೇ ಚಿತ್ರಣವನ್ನು

ಅಳವಡಿಸಿಕೊಳ್ಳುತ್ತಾರೆ. ನಂತರ ಕುರಿ ಮಂದೆಯಂತೆಅದನ್ನು ಅನುಸರಿಸಲು ಆರಂಭವಾಗುತ್ತದೆ. ಅರ್ಥಶಾಸ್ತ್ರಜ್ಞರು ಸಹ ವಾಸ್ತವದ ಒಂದು ಭಾಗದ ಚಿತ್ರಣವೊಂದನ್ನು ರಚಿಸಿಕೊಳ್ಳುತ್ತಾರೆ ಮತ್ತು ಅವು ಕೆಲವೊಮ್ಮೆ ಜಗತ್ತಿನ ಕುರಿತಾದ ನಮ್ಮ ತಿಳಿವಳಿಕೆಯನ್ನು ಹರಿತಗೊಳಿಸಬಹುದು, ಆದರೆ ಕೆಲವೊಮ್ಮೆ ನಾವು ಜಗತ್ತನ್ನು ಅರ್ಥಮಾಡಿಕೊಳ್ಳಲು ಅಡೆತಡೆಯಾಗಿ ನಿಲ್ಲಬಹುದು. ಅಂತಹ ಚಿತ್ರಣವೊಂದು ತಕ್ಷಣ ಈ ವಾಸ್ತವಂಶವನ್ನು ಗುರುತಿಸದೇ ನಮ್ಮನ್ನು ತಪ್ಪು ದಾರಿಗೆಳೆಯುವಂತಾಗಬಹುದು. ಒಂದು ವೇಳೆ ಅಂತಹ ಕಲ್ಪನೆಗಳು, ಅದರ ಪರವಾದ ಸಿಬ್ಬಂದಿ ನೇಮಕಾತಿ, ಪತ್ರಿಕೆಗಳಲ್ಲಿ ಅವುಗಳಿಗೆ ದೊರಕುವ ಶ್ರೇಷ್ಠ ದರ್ಜೆ, ಅವಕ್ಕೆ ಸಿಗಬಹುದಾದ ಸಂಶೋಧನಾ ನಿಧಿಗಳು, ಗೌರವಗಳು, ಬಹುಮಾನಗಳು ಮುಂತಾದ ಧನಾತ್ಮಕ ಪ್ರತಿಕ್ರಿಯೆಗಳ ಮೂಲಕ ವಿದ್ವತ್ ವಲಯದ ಚಟುವಟಿಕೆಗಳಲ್ಲಿ ಅವು ಬೃಹದಾಕಾರವನ್ನು ಪಡೆದುಕೊಂಡಲ್ಲಿ ಆಗ ಅದರ ಫಲವಾಗಿ ವಿದ್ವಜ್ಜನರ ನಡುವಿನ ನೀರ್ಗುಳ್ಳೆಯೊಂದು ಹುಟ್ಟಿಕೊಳ್ಳಬಹುದು. ವಿಷಯದ ಸಂಕೀರ್ಣತೆಯನ್ನು ಗಮನಿಸಿದಲ್ಲಿ ಇದೊಂದು ದೊಡ್ಡ ಅಪಾಯವಾಗಿದ್ದು ಇದನ್ನು ಖಚಿತವಾಗಿ ನಿವಾರಿಸಲಾಗಿದೆ ಎಂದುಕೊಳ್ಳಲು ಸಾಧ್ಯವಿಲ್ಲ. ಆದರೆ ಆರ್ಥಿಕ ಚಿಂತನೆಯ ಚರಿತ್ರೆಯ ಪರಿಚಯವನ್ನು ಹೊಂದಿರುವ, ಅದು ಎಲ್ಲಿ ಗೆದ್ದಿತ್ತು ಮತ್ತು ಎಲ್ಲಿ ದಾರಿ ತಪ್ಪಿತ್ತು ಎಂಬುದನ್ನು ಬಲ್ಲ ಯಾರೇ ಆಗಲಿ ಈ ಅಪಾಯದ ಬಗ್ಗೆ ಅರಿವನ್ನು ಹೊಂದಿದ್ದು ರಕ್ಷಕರಾಗಿರುತ್ತಾರೆ.

ಅಂತಿಮವಾಗಿ, ಕಳೆದ ಕೆಲವು ಶತಮಾನಗಳಲ್ಲಿ ಆರ್ಥಿಕತೆಯಲ್ಲಾಗಿರುವ ಬೃಹತ್ತಾದ ಬದಲಾವಣೆಗಳು ಅದರ ಕುರಿತಾದ ನಮ್ಮ ನೋಟವನ್ನು ಸಹ ಬದಲಾಯಿಸಿವೆ ಎಂಬುದನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಅಮೇರಿಕಾದ ಅರ್ಥಶಾಸ್ತ್ರೀಯ ಚರಿತ್ರಕಾರರಾದ ರಾಬರ್ಟ್. ಡಬ್ಲ್ಯೂ. ಫೋಜೆಲ್ (1926 - 2013) ಅವರ ಕೃತಿಯೊಂದರಿಂದ ಅಳವಡಿಸಿಕೊಂಡ ಈ ಕೆಳಗಿನ ಚಿತ್ರವನ್ನು ಗಮನಿಸಿರಿ. ಪ್ರಮುಖ ಬೆಳವಣಿಗೆಗಳು ಮತ್ತು ತಂತ್ರಜ್ಞಾನದ ಆವಿಷ್ಕಾರಗಳೊಂದಿಗೆ ಹೋಲಿಸಿದಾಗ ಜಗತ್ತಿನ ಜನಸಂಖ್ಯೆಯು ಹೇಗೆ ಬೆಳೆದಿದೆ ಎಂಬ ಸಂಬಂಧವನ್ನು ತೋರಿಸುತ್ತಾ ಅದು ಮಾನವ ಕುಲದ ಚರಿತ್ರೆಯನ್ನು ಒಂದು ನೋಟದಲ್ಲಿ ಮುಂದಿಡುತ್ತದೆ. ಹೊಸ ಜಗತ್ತನ್ನು ಕಂಡುಹಿಡಿದ ನಂತರ, ಎರಡನೆಯ ಕೃಷಿ ಕ್ರಾಂತಿಯು ಘಟಿಸಿ ಮತ್ತು ಕೈಗಾರಿಕಾ ಕ್ರಾಂತಿಯ ಆರಂಭವಾದಮೇಲೆ ಎಂದರೆ 18ನೆಯ ಶತಮಾನದ ಹೊಸ್ತಿಲು ದಾಟಿದ ಮೇಲೆ ಮಾತ್ರ ಅಭಿವೃದ್ಧಿ ಮತ್ತು ಬೆಳವಣಿಗೆ ಕಂಡು ಬರುತ್ತದೆ. ಯುರೋಪು ಮತ್ತು ಅದರ ಹೊರದೇಶದ ಕೂಸುಗಳು (ಅಮೆರಿಕಾ ಸಂಯುಕ್ತ ಸಂಸ್ಥಾನಗಳು, ಕೆನಡಾ, ಆಸ್ಟ್ರೇಲಿಯಾ ಮತ್ತು ನ್ಯೂಜಿಲೆಂಡ್ ಗಳು) ಒಂದು ಸುಸ್ಥಿರವಾದ ಹಾಗೂ ಹೆಚ್ಚಿನ ಮಟ್ಟದ ಆರ್ಥಿಕ ಬೆಳವಣಿಗೆಯ ಹಾದಿಯನ್ನು ಸಾಧಿಸಿಕೊಂಡು ಈ ಹೊಸ ನೆಲೆ ನಾಡುಗಳು ಮತ್ತು ಜಗತ್ತಿನ ಉಳಿದ ಭಾಗ ಇವುಗಳ ನಡುವೆ ಸಂಪತ್ತಿನ ಅಂತರವನ್ನು ಸೃಷ್ಟಿಸಿದವು. ಇದನ್ನು "ಬೃಹತ್ ಕವಲೊಡೆಯುವಿಕೆ"(ಗ್ರೇಟ್ ಡೈವರ್ ಜೆನ್ಸ್) ಎಂದು ಕರೆಯಲಾಗಿದ್ದು, ಅದೇ ಹೆಸರಿನ ಪುಸ್ತಕದಲ್ಲಿ ಕೆನೆತ್ ಪೋಮೆರಾನ್ಸ್ ಅವರು ಇದನ್ನು ಚರ್ಚಿಸಿದ್ದಾರೆ.

ಚಿತ್ರ

—---

ಜನಸಂಖ್ಯೆ (ಮಿಲಿಯನ್ ಗಳಲ್ಲಿ)

0
1000
2000
3000
4000
5000
6000

ಕಾಲಾವಧಿ (ವರ್ಷಗಳಲ್ಲಿ)

-9000

-6000
-5000
-4000
-3000
-2000
-1000
0
1000
2000
—--------------------------

ಮೊದಲ ಕೃಷಿ ಕ್ರಾಂತಿಯ ಆರಂಭ

ಕುಂಬಾರಿಕೆಯ ಆರಂಭ

ನೇಗಿಲಿನ ಆವಿಷ್ಕಾರ

ಮಾನವ ನಿರ್ಮಿತ ನೀರಾವರಿಯ ಆರಂಭ

ಮೊದಲ ನಗರಗಳು

ಲೋಹ ಶಾಸ್ತ್ರದ ಆರಂಭ

ಬರವಣಿಗೆಯ ಆರಂಭ

ಗಣಿತದ ಆರಂಭ

ಪ್ರಾಚೀನ ಗ್ರೀಸ್ ನ ಮೇರು ಬಿಂದು

ಪ್ರಾಚೀನ ರೂಮ್ ನ ಮೇರು ಬಿಂದು

ಕಪ್ಪು ಪ್ಲೇಗ್

ಆಧುನಿಕ ಜಗತ್ತನ್ನು ಕಂಡುಹಿಡಿದದ್ದು

—--------------------------

ಎರಡನೇ ಕೃಷಿ ಕ್ರಾಂತಿಯ ಆರಂಭ

ಕೈಗಾರಿಕಾ ಕ್ರಾಂತಿಯ ಆರಂಭ

ಉಗಿಬಂಡಿಯ ಆವಿಷ್ಕಾರ

ರೈಲು ರಸ್ತೆಗಳ ಆರಂಭ

ಸೂಕ್ಷ್ಮಜೀವಿ ಸಿದ್ಧಾಂತ

ವಿದ್ಯುದೀಕರಣ ಮತ್ತು ದೂರವಾಣಿಯ ಆವಿಷ್ಕಾರ

ಸ್ವಯಂಚಾಲಿತ ವಾಹನಗಳ ಆವಿಷ್ಕಾರ

ವಿಮಾನದ ಆವಿಷ್ಕಾರ

ಪೆನ್ಸಿಲಿನ್

ಡಿ ಎನ್ ಎ ಅನ್ನು ಕಂಡುಹಿಡಿದದ್ದು

ಮಲೇರಿಯಾ ವಿರುದ್ಧ ಸಮರ

ಕ್ಷಿಪ್ರ ವೇಗದ ಗಣಕ ಯಂತ್ರ

ಅಣುಶಕ್ತಿ

ಚಂದ್ರನ ಮೇಲೆ ಕಾಲಿಟ್ಟದ್ದು
ವೈಯಕ್ತಿಕ ಗಣಕ ಯಂತ್ರ
ಮಾನವ ಜೀನೋಮ್ ಯೋಜನೆ

—-------------------------
ಚಿತ್ರ 1.1. ಜನಸಂಖ್ಯೆಯ ಬೆಳವಣಿಗೆ ಮತ್ತು ತಂತ್ರಜ್ಞಾನದ ಚರಿತ್ರೆಯಲ್ಲಿನ ಕೆಲವು ಆಯ್ದ ಘಟನೆಗಳು. ರಾಬರ್ಟ್. ಡಬ್ಲ್ಯೂ. ಫೋಜೆಲ್ ಅವರ ಬರವಣಿಗೆಯಿಂದ ಅಳವಡಿಸಿಕೊಂಡದ್ದು, 1999, 'ಕ್ಯಾಚಿಂಗ್ ಅಪ್ ವಿಥ್ ದಿ ಎಕಾನಮಿ' , ಅಮೆರಿಕನ್ ಎಕನಾಮಿಕ್ ರಿವ್ಯೂ, 89 ( 1) : 1 - 21
—------------------

ಯುರೋಪಿನ ಆರ್ಥಿಕತೆಯು ಮೇಲೇಳುತ್ತಿದ್ದಂತೆ -ನಾವು ಕೊಟ್ಟಿರುವ ಚಿತ್ರದಲ್ಲಿ ಕರ್ವ್ ತೀವ್ರವಾಗಿ ಮೇಲಕ್ಕೆ ತಿರುಗುವ ಹಂತದಲ್ಲಿ- ರಾಜಕೀಯ ಅರ್ಥಶಾಸ್ತ್ರದ ಅಧ್ಯಯನವು ಅರಳಿಕೊಂಡಿತು ಎಂಬುದು ಕಾಕತಾಳಿಯವಲ್ಲ. ತೆರೆದುಕೊಳ್ಳುತ್ತಿರುವ ಆರ್ಥಿಕ ಚಲನಶೀಲತೆ ಮತ್ತು ಆ ಚಲನೆಯ ಒಳಗೆ ಕೆಲಸ ಮಾಡುತ್ತಿರುವ ಶಕ್ತಿಗಳು ತಮ್ಮನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಆರ್ಥಿಕ ನೀತಿಯಲ್ಲಿ ಅದನ್ನು ಅನ್ವಯಿಸಬೇಕು ಎಂದು ಆಗ್ರಹಿಸುತ್ತವೆ. ಆನಂತರ ಮಾನವ ಕುಲವು ಒಂದು ಸಂಪೂರ್ಣವಾಗಿ ವಿಭಿನ್ನವಾಗಿರುವ ಹಾದಿಯಲ್ಲಿ ಪ್ರಯಾಣ ಆರಂಭಿಸುತ್ತದೆ ಮತ್ತು ಅದರ ಕೊನೆ ಏನೆಂಬುದು ನಮಗೆ ತಿಳಿದಿಲ್ಲ.

ಅರ್ಥಶಾಸ್ತ್ರೀಯ ಚಿಂತನೆಯ ಚರಿತ್ರೆಯನ್ನು ವಿಶ್ಲೇಷಿಸುವಲ್ಲಿ ಬೇರೆ ಬೇರೆ ಹಾದಿಗಳಿವೆ. ಈ ಸಂಪುಟದಲ್ಲಿ ಗಮನವನ್ನು ಕೇಂದ್ರೀಕರಿಸಿರುವುದು ಅರ್ಥಶಾಸ್ತ್ರದ ಸಿದ್ಧಾಂತಗಳ ಬಗ್ಗೆ : ಅವುಗಳ ರಚನೆ, ಕ್ಷೇತ್ರದ ಒಳಗೆ ಅವುಗಳ ಸ್ಥಾನ ಹಾಗೂ ನಿರ್ಣಾಯಕತೆ ಮತ್ತು ಆರ್ಥಿಕ ನೀತಿಗೆ ಸಂಬಂಧಿಸಿದಂತೆ ಅನ್ವಯಿಕತೆ ಕುರಿತು. ನನಗೆ ವಿಶೇಷವಾಗಿ ಮುಖ್ಯವೆನಿಸುವ ಅರ್ಥಶಾಸ್ತ್ರಜ್ಞರು ಮತ್ತು ಅವರ ಬೋಧನೆಗಳ ಕುರಿತು ನಾನು ಗಮನವನ್ನು ಸೆಳೆಯುತ್ತೇನೆ. ನಾ ಎಸೆದಿರುವ ಬಲೆಯಿಂದ ಯಾವ ದೊಡ್ಡ ಮೀನೂ ತಪ್ಪಿಸಿಕೊಂಡಿಲ್ಲವೆಂದು ನಾನು ಆಶಿಸುತ್ತೇನೆ.

ನನ್ನ ವಿವರಣೆಯಲ್ಲಿ ಕೆಲವು ಕೊರತೆಗಳಿವೆ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ನನ್ನ ಗಮನವು ಕೇಂದ್ರೀಕೃತವಾಗಿರುವುದು ಯುರೋಪಿನ ಭೌತಿಕ ಸಂಪ್ರದಾಯಗಳ ಮೇಲೆ ಮತ್ತು ಪಾಶ್ಚಾತ್ಯ ಎನ್ನಿಸಿಕೊಂಡಿರುವ ಜಗತ್ತಿನಲ್ಲಿ ಅವುಗಳ ಮುಂದುವರಿಕೆಯ ಮೇಲೆ. ಆದರೆ ಎಲ್ಲ ಮುಂದುವರೆದ ನಾಗರಿಕತೆಗಳು ಸಹ ಆರ್ಥಿಕ ಸಂಗತಿಗಳ ಅನ್ವೇಷಣೆಯಲ್ಲಿ ಗಮನಾರ್ಹ ಸಾಧನೆಗಳನ್ನು ಮಾಡಿರುವುದು ಒಂದು ವಾಸ್ತವ ಸಂಗತಿಯೇ ಸರಿ. ಉದಾಹರಣೆಗೆ ಚೀನಾದ ಆರ್ಥಿಕ ಚಿಂತನೆಯ ಇತಿಹಾಸದ ಬಗ್ಗೆ ಆಸಕ್ತರಾಗಿರುವ ಓದುಗರು ಹು ಜಿ ಚುವಾಂಗ್ (2009) ಎಂಬುವರನ್ನು ಓದಬಹುದು. ಎಲ್ ಅಶ್ಕೇರ್ ಎನ್ನುವರು ಇಸ್ಲಾಮಿನ ಆರ್ಥಿಕ ಚಿಂತನೆಯ ಬಗ್ಗೆ ಬರೆದಿರುವ ಪುಸ್ತಕ ಇನ್ನೊಂದು ಉದಾಹರಣೆ. ಭೌಗೋಳಿಕವಾಗಿ ಹಾಗೂ ಕೆಲವು ವಿಷಯಗಳಕಡೆ ಕೂಡ ಗಮನ ಹರಿಸಿಲ್ಲದಿರುವುಂಟು, ಉದಾಹರಣೆಗೆ ವ್ಯಾಪಾರ ಆಡಳಿತ, ವ್ಯವಸ್ಥಾಪಕ ಆರ್ಥಿಕತೆ, ಅರ್ಥಮಾಪನ ಶಾಸ್ತ್ರ ಇವುಗಳನ್ನು ಕೈ ಬಿಡಲಾಗಿದೆ.

ಕೊನೆಯದಾಗಿ ಇಲ್ಲಿ ಉಲ್ಲೇಖಿಸಲಾಗಿರುವ ಸಾಹಿತ್ಯದ ಕುರಿತು ಒಂದು ಮಾತನ್ನು ಹೇಳುವುದು ಅತ್ಯವಶ್ಯಕ: ಇಲ್ಲಿನ ಉಲ್ಲೇಖಗಳು ಮತ್ತು ಗ್ರಂಥ ಋಣವು ಕೆಲವೊಂದು ಮುಖ್ಯ ಪ್ರಾಥಮಿಕ ಕೃತಿಗಳ ಕುರಿತು ಓದುಗರ ಗಮನವನ್ನು ಸೆಳೆಯುವುದಲ್ಲದೆ ಮುಖ್ಯ ಅರ್ಥಶಾಸ್ತ್ರಜ್ಞರು, ಅರ್ಥಶಾಸ್ತ್ರದ ಸಿದ್ಧಾಂತಗಳ ವಿಭಿನ್ನ ಶಾಖೆಗಳು ಅಥವಾ ಈ ಕ್ಷೇತ್ರದಲ್ಲಿನ ಉಪಶಾಖೆಗಳ ಬೆಳವಣಿಗೆಗಳು ಇವುಗಳನ್ನು ಗುರುತಿಸುವ ಬಗ್ಗೆ ಮತ್ತು ಇವುಗಳನ್ನು ಸಾರಾಂಶದಲ್ಲಿ ಹೇಳುವ ಪುಸ್ತಕಗಳು ಮತ್ತು ಲೇಖನಗಳನ್ನು ಸಹ ಒಳಗೊಂಡಿವೆ. ಓದುಗರಿಗೆ ಆಸಕ್ತಿ ಇರುವ ಪ್ರಾಥಮಿಕ ಸಾಹಿತ್ಯವನ್ನು ಸುಲಭವಾಗಿ ಹುಡುಕಲು ಅಗತ್ಯವಾದ ಎಲ್ಲಾ ಮಾಹಿತಿಯನ್ನು ಇವು ಹೊಂದಿವೆ. ಈ ಪಠ್ಯದಲ್ಲಿರುವ ವಿವರಗಳನ್ನು ಉಲ್ಲೇಖಗಳು ಮತ್ತು ಗ್ರಂಥಋಣದಲ್ಲಿ ಪಟ್ಟಿ ಮಾಡಿರುವ ಕೃತಿಗಳಲ್ಲಿ ಕಂಡುಕೊಳ್ಳಬಹುದು.

----------------------------------------------------------------------------------------------------------------------
--